# FOGSI

Federation of Obstetric & Gynecological Societies of India

# 24th KSOGA Conference

## On 4-6th October 2013, Friday At Hubli

MJS PR

**Knowledge / Strategic Consultancy & Communications firm**

- Integrated Communications
- Brand Solutions
- Marketing Communication
- Media Advocacy
- Lobbying & Liaison

www.mjspr.com

## Print media coverage

| S.No. | Name of the Publication |
|---|---|
| | **English Dailies** |
| 1 | The Hindu |
| 2 | The New Indian Express |
| | **Kannada Dailies** |
| 3 | Prajavani –(with photo) |
| 4 | Udayavani –(with photo) |
| 5 | Kannada Prabha –(with photo) |
| 6 | Hosa Digantha –(with photo) |
| 7 | Hosa Digantha –(with photo) |
| 8 | Vijayavani –(with photo) |
| 9 | Vijayavani –(with photo) |
| 10 | Indu Sanje –(with photo) |
| 11 | Indu Sanje –(with photo) |
| 12 | Sanje Darpana –(with photo) |
| 13 | Sanje Darpana –(with photo) |
| 14 | Hubli Sanje –(with photo) |
| 15 | Hubli Sanje –(with photo) |
| 16 | NagarikaVani –(with photo) |

| Name of Media: | The Hindu | Language: | English |
|---|---|---|---|
| Date : | 06.10.2013 | Page: | 3 |

# Programmes started for health workers: FOGSI

Staff Correspondent

**HUBLI:** President of the Federation of Obstetric and Gynaecological Societies of India (FOGSI) Hema Divakar said that in an effort to strengthen healthcare services for women in Karnataka, the federation had launched capacity-building programmes for health workers and doctors.

She was addressing a gathering of doctors from across Karnataka after receiving the "Lifetime Achievement Award" from the Karnataka State Obstetrics and Gynaecology Association (KSOGA) during the 24th KSOGA conference here on Saturday.

Dr. Hema said the federation had launched several initiatives for strengthening healthcare services for women.

KSOGA president M.G. Hiremath said it was the fifth time Hubli-Dharwad OBG Society was hosting the KSOGA conference.

| Name of Media: | The New Indian Express | Language: | English |
|---|---|---|---|
| Date : | 06.10.2013 | Page: | 3 |

# North Karnataka Lags Behind in Health Services

**Express News Service**

**Hubli:** Women living in the interior parts are deprived of quality maternal healthcare services because of a variety of reasons, including socio-economic and connectivity challenges, opined president of Federation of Obstetric and Gynaecological Societies of India (FOGSI) Dr Hema Divakar.

At the inaugural session of four-day 24th conference of the Karnataka State Obstetrics and Gynaecology Association (KSOGA) held here on Friday, Dr Hema said, a significant lag in healthcare services delivery was found in North Karnataka districts.

"Maternal mortality statistics are worse than other regions of the state. The need of the hour is to channelise efforts with focus on such regions," she stressed.

In an effort to strengthen healthcare services for women in hinterland of Karnataka, the FOGSI has launched several initiatives, including capacity building of frontline health workers and training obstetricians and gynaecologists in the latest technologies and trends, Dr Hema said.

> **'Karnataka is yet to catch up with Kerala and Tamil Nadu where the MMR is less than 100 per one lakh women'**

Karnataka is yet to catch up with Kerala and Tamil Nadu where the MMR is less than 100 per one lakh women, she added.

KSOGA president Dr MG Hiremath, Prof Tsia Shu Lo from Taiwan, Dr Suresh Kumarasamy, Dr Gopinath, Dr Parul Kotadiwal, Dr Sheela Mane and others took part in the conference.

| Name of Media: | Prajavani | Language: | Kannada |
|---|---|---|---|
| Date : | 05.10.2013 | Page: | 2 |

# ಮಹಿಳೆಯರ ಆರೋಗ್ಯ ಕಾಳಜಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಹಿಳೆಯರ ಆರೋಗ್ಯ ರಕ್ಷಣೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಸ್ತ್ರೀರೋಗ ತಜ್ಞರ ಮುಂದಿನ ದೊಡ್ಡ ಸವಾಲು ಆಗಿದೆ ಎಂದು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷೆ ಡಾ.ಹೇಮಾ ದಿವಾಕರ ಹೇಳಿದರು.

ಇಲ್ಲಿನ ಕಿಮ್ಸ್ ಸಭಾಂಗಣದಲ್ಲಿ ಶುಕ್ರವಾರ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ 24ನೇ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ವೈದ್ಯಕೀಯ ಕ್ಷೇತ್ರ ತಂತ್ರಜ್ಞಾನದ ಬಳಕೆಯಲ್ಲಿ ಸಾಕಷ್ಟು ಮುಂದಿದೆ. ವೈದ್ಯಕೀಯ ಕ್ಷೇತ್ರದಲ್ಲೂ ಉನ್ನತ ಬೆಳವಣಿಗೆಯಾಗಿದೆ. ಆದರೆ ಬೇರುಮಟ್ಟದಲ್ಲಿ ಅದರ ಉಪಯೋಗ ತಲುಪುತ್ತಿಲ್ಲ. ಸಮಾಜದ ಕಟ್ಟಕಡೆಯ ಜನರಿಗೂ ಸುಲಭವಾಗಿ ಅದು ಲಭ್ಯವಾಗುವಂತಹ ಸ್ಥಿತಿ ನಿರ್ಮಿಸುವಲ್ಲಿ ಸರ್ಕಾರದೊಂದಿಗೆ ಕೈಜೋಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.


ಹೆರಿಗೆ ಸಂದರ್ಭದಲ್ಲಿ ತಾಯಿ–ಮಗುವಿನ ಸಾವಿನ ಪ್ರಮಾಣ ತಗ್ಗಿಸಲು ಹಾಗೂ ಸುರಕ್ಷಿತ ಹೆರಿಗೆ–ಬಾಣಂತನದ ಬಗ್ಗೆ ಅರಿವು ಮೂಡಿಸಲು ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರು ಗಮನ ನೀಡಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಕಿಮ್ಸ್ ನಿರ್ದೇಶಕಿ ಡಾ.ವಸಂತಾ ಕಾಮತ್ ಮಾತನಾಡಿ, ಈ ಹಿಂದೆ ಪಾಶ್ಚಿಮಾತ್ಯ ವೈದ್ಯಕೀಯ ಕ್ಷೇತ್ರದ ಅವಲಂಬನೆ ನಮ್ಮಲ್ಲಿ ಹೆಚ್ಚಾಗಿತ್ತು. ಆದರೆ ಈಗ ದೇಶದ ವೈದ್ಯಕೀಯ ರಂಗದಲ್ಲಿ ವಿಶ್ವಮಟ್ಟದ ಸಾಧನೆ ಹಾಗೂ ಸಂಶೋಧನೆಗಳು ಸಾಧ್ಯವಾಗಿದ್ದು, ವಿದೇಶಿಯರು ಭಾರತದತ್ತ ನೋಡುತ್ತಿದ್ದಾರೆ. ಅಧ್ಯಯನಕ್ಕಾಗಿ ಇಲ್ಲಿಗೆ ಬರುತ್ತಿದ್ದಾರೆ. ಇದು ದೇಶದ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಿನ ಧನಾತ್ಮಕ ಬೆಳವಣಿಗೆ ಎಂದು ಹೇಳಿದರು.

ಸಮಾರಂಭದಲ್ಲಿ ಹಿರಿಯ ತಜ್ಞ ವೈದ್ಯರಾದ ಡಾ.ಎಂ.ಜಿ.ಹಿರೇಮಠ, ದಿಲೀಪ್ ಕುಮಾರ ದತ್ತ, ಡಾ.ವಿಜಯಚಂದ್ರ, ಡಾ.ಕಸ್ತೂರಿ ದೋಣಿಮಠ, ಎಸ್.ಎಸ್.ಹಿರೇಮಠ, ಡಾ.ಬಿ.ಆರ್.ದೇಸಾಯಿ, ಕಿಮ್ಸ್ ಪ್ರಾಚಾರ್ಯ ಡಾ.ಯು.ಎಸ್.ಹಂಗರಗಾ, ಡಾ.ವಿದ್ಯಾಭಟ್, ತೈವಾನ್ ದೇಶದ ವೈದ್ಯ ತ್ಸುಯಾಸು–ಲೊ ಮತ್ತಿತರರು ಪಾಲ್ಗೊಂಡಿದ್ದರು.

ಸಮಾವೇಶದ ಉದ್ಘಾಟನೆಯ ನಂತರ ಹಾಸ್ಯ ಕಲಾವಿದರಾದ ಗಂಗಾವತಿಯ ಪ್ರಾಣೇಶ್ ಹಾಗೂ ವಿಜಾಪುರದ ಇಂದುಮತಿ ಸಾಲಿಮಠ ಅವರಿಂದ ನಗೆಹಬ್ಬ ಆಯೋಜಿಸಲಾಗಿತ್ತು.



ಹುಬ್ಬಳ್ಳಿಯ ಕಿಮ್ಸ್ ಸಭಾಂಗಣದಲ್ಲಿ ಶುಕ್ರವಾರ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ 24ನೇ ಸಮಾವೇಶದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷೆ ಡಾ.ಹೇಮಾ ದಿವಾಕರ ಮಾತನಾಡಿದರು. ಕಿಮ್ಸ್ ನಿರ್ದೇಶಕಿ ಡಾ.ವಸಂತಾ ಕಾಮತ್, ಡಾ.ಎಂ.ಜಿ. ಹಿರೇಮಠ, ದಿಲೀಪ್ ಕುಮಾರ ದತ್ತ, ಡಾ.ವಿಜಯಚಂದ್ರ, ಡಾ.ಕಸ್ತೂರಿ ದೋಣಿಮಠ ಮತ್ತಿತರರು ಚಿತ್ರದಲ್ಲಿದ್ದಾರೆ (ಮೊದಲ ಚಿತ್ರ). ಸಮಾವೇಶದಲ್ಲಿ ಗಂಗಾವತಿ ಪ್ರಾಣೇಶ ಹಾಸ್ಯ ಚಟಾಕಿ ಹಾರಿಸಿದರು

| Name of Media: | Udayavani | Language: | Kannada |
| --- | --- | --- | --- |
| Date : | 05.10.2013 | Page: | 2 |

ಸಮಾವೇಶ ಉದ್ಘಾಟನೆ

■ ವಿಚಾರ ಸಂಕಿರಣದ ಸ್ಮರಣ ಸಂಚಿಕೆ ಬಿಡುಗಡೆ

# ಸಮರ್ಪಕ ವೈದ್ಯಸೇವೆಯೇ ನಿಜವಾದ ಸಾಧನೆ: ಡಾ। ಹೇಮಾ

ಹುಬ್ಬಳ್ಳಿ: ದೇಶದ ಎಲ್ಲ ಮಹಿಳೆಯರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ದೊರೆಯುವಲ್ಲಿ ಸ್ತ್ರೀರೋಗ ತಜ್ಞರ ಪಾತ್ರ ಮುಖ್ಯವಾಗಿದೆ ಎಂದು ಪ್ರಸೂತಿ ಹಾಗೂ ಸ್ತ್ರೀರೋಗತಜ್ಞರ ಸಂಸ್ಥೆಗಳ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷೆ ಹೇಮಾ ದಿವಾಕರ ಹೇಳಿದರು.

ಕಿಮ್ಸ್ ಸಭಾಂಗಣದಲ್ಲಿ ಪ್ರಸೂತಿ ಹಾಗೂ ಸ್ತ್ರೀರೋಗತಜ್ಞರ ಸಂಸ್ಥೆಯ ಹುಬ್ಬಳ್ಳಿ-ಧಾರವಾಡ ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರ ಸಂಸ್ಥೆಯ 24ನೇ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಸ್ತ್ರೀರೋಗ ಚಿಕಿತ್ಸೆ ಕ್ಷೇತ್ರದಲ್ಲಿ ಸಾಕಷ್ಟು ತಾಂತ್ರಿಕ ಪ್ರಗತಿಯಾಗುತ್ತಿದೆ. ಆದರೂ ಸಹ ಅನೇಕ ಬಡ ಮಹಿಳೆಯರಿಗೆ ಸಮರ್ಪಕ ವೈದ್ಯಕೀಯ ಸೇವೆ ಲಭಿಸುತ್ತಿಲ್ಲ, ವೈದ್ಯಕೀಯ ಸೇವೆ ತಲುಪದ ಜನರನ್ನು ತಲುಪಿ ಅಗತ್ಯ ಸೇವೆ ಒದಗಿಸುವುದು ವೈದ್ಯರ ಆದ್ಯ ಕರ್ತವ್ಯವಾಗಿದೆ ಎಂದರು.

ನಾನು ಕಳೆದ 19 ವರ್ಷಗಳಿಂದ ಮುಂಬೈನಲ್ಲಿ ಬಡ ರೋಗಿಗಳಿಗೆ ವೈದ್ಯಕೀಯ ಸೇವೆ ಒದಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದೇನೆ.ನಮ್ಮ ಒಕ್ಕೂಟ ಎನಿಮಿಯಾ, ಕ್ಯಾನ್ಸರ್, ಲೈಂಗಿಕ ರೋಗಗಳು, ಮಧುಮೇಹ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದೆ. ದೊಡ್ಡ ಆಸ್ಪತ್ರೆಗಳನ್ನು ಕಟ್ಟುವುದು ಮುಖ್ಯವಲ್ಲ, ಆದರೆ ಅಲ್ಲಿ ರೋಗಿಗಳಿಗೆ ಸಮರ್ಪಕ ಸೇವೆ ಒದಗಿಸುವುದು ಮುಖ್ಯ ಎಂದರು.

ವಿಚಾರ ಸಂಕಿರಣದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಕಿಮ್ಸ್ ನಿರ್ದೇಶಕಿ ಡಾ। ವಸಂತಾ ಕಾಮತ, ಕೆಲ ದಶಕಗಳ ಹಿಂದೆ ವೈದ್ಯಕೀಯ ವಿದ್ಯಾರ್ಥಿಗಳು ಪಾಶ್ಚಾತ್ಯ ಪುಸ್ತಕಗಳನ್ನಷ್ಟೇ ಅವಲಂಬಿಸಬೇಕಿತ್ತು. ಅವರ ಪದ್ಧತಿಯಲ್ಲಿಯೇ ಕಲಿಯಬೇಕಿತ್ತು. ಆದರೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿದ್ದು, ಸದ್ಯ ಭಾರತ ವೈದ್ಯಕೀಯ ಪ್ರವಾಸೋದ್ಯಮದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ವಿವಿಧ ದೇಶಗಳ ರೋಗಿಗಳು ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆಯಲು ನಮ್ಮ ದೇಶಕ್ಕೆ ಬರುವಂತಾಗಿದೆ ಎಂದರು.

ತೈವಾನ್‌ನ ಚಾಂಗ್‌ವುಂಗ್ ವಿಶ್ವವಿದ್ಯಾಲಯದ ಯುರೋಗೈನಾಕಲಜಿ ವಿಭಾಗದ ಮುಖ್ಯಸ್ಥ ಲೊ ಸಿಯಾ ಶು ಮಾತನಾಡಿದರು. ರಾಜ್ಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವಾರ್ಷಿಕ ವರದಿ ವಾಚನ ಮಾಡಿದರು. ಡಾ। ದಿಲೀಪಕುಮಾರ ದತ್ತಾ, ಡಾ। ಬಿ.ಆರ್.ದೇಸಾಯಿ, ಡಾ। ಯು.ಎಸ್.ಹಂಗರಗಾ, ಡಾ। ಎಂ.ಜಿ.ಹಿರೇಮಠ, ಡಾ। ರತ್ನಮಾಲಾ ದೇಸಾಯಿ ಉಪಸ್ಥಿತರಿದ್ದರು.




ಹುಬ್ಬಳ್ಳಿ: ನಗರದ ಕಿಮ್ಸ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರ ಸಂಸ್ಥೆಯ 24ನೇ ವಿಚಾರ ಸಂಕಿರಣವನ್ನು ಡಾ। ಹೇಮಾ ದಿವಾಕರ ಉದ್ಘಾಟಿಸಿದರು.

| Name of Media: | Kannada Prabha | Language: | Kannada |
| --- | --- | --- | --- |
| Date : | 06.10.2013 | Page: | 3 |

## ಸ್ತ್ರೀ ರೋಗ ತಜ್ಞರ ಒಕ್ಕೂಟದ ಸಮ್ಮೇಳನದಲ್ಲಿ ಡಾ. ಹೇಮಾ ದಿವಾಕರ್

# ಉಕ ಜಿಲ್ಲೆಗಳಲ್ಲಿ ಬಾಣಂತಿಯರ ಮರಣ ಪ್ರಮಾಣ ಹೆಚ್ಚಳ

**ಕನ್ನಡಪ್ರಭ ವಾರ್ತೆ, ಹುಬ್ಬಳ್ಳಿ, ಅ. 5**

ಉತ್ತರ ಕರ್ನಾಟಕದ ಬಿಜಾಪುರ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಬಾಣಂತಿಯರ ಮರಣ ಪ್ರಮಾಣ ಹೆಚ್ಚಿದೆ ಎಂದು ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರ ಭಾರತೀಯ ಒಕ್ಕೂಟದ ಅಧ್ಯಕ್ಷೆ ಡಾ. ಹೇಮಾ ದಿವಾಕರ್ ಹೇಳಿದರು.

ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರ ಒಕ್ಕೂಟದ 24ನೇ ಸಮ್ಮೇಳನದಲ್ಲಿ ಮಾತನಾಡಿದರು. ಗ್ರಾಮೀಣ ಪ್ರದೇಶದ ಗರ್ಭಿಣಿಯರಿಗೆ ಸೂಕ್ತ ತಿಳಿವಳಿಕೆ ಮತ್ತು ಯುವಜನಾಂಗಕ್ಕೆ ತರಬೇತಿ ನೀಡುವ ಉದ್ದೇಶದಿಂದ ಸಮ್ಮೇಳನ ಹಮ್ಮಿಕೊಳ್ಳಲಾಗಿದ್ದು, ರಾಜ್ಯದಲ್ಲಿ ಮಣಿಪಾಲ್ ವೈದ್ಯಕೀಯ ಮಹಾವಿದ್ಯಾಲಯದ ವಿವಿಧ ಕಾರ್ಯಕ್ರಮಗಳು, ಕರುಣಾ ಟ್ರಸ್ಟ್ ಮತ್ತು ಆರ್ಟಿಸ್ಟ್‌ನ ಸಾರ್ವಜನಿಕ-ಖಾಸಗಿ ಸಹಭಾಗಿತ್ವ, ಕೆಎಚ್‌ಪಿಟಿಯ ನರ್ಸ್ ಮೆಂಟರ್ಸ್ ಕಾರ್ಯಕ್ರಮಗಳ ಮುಖಾಂತರ ದೂರ ಪ್ರದೇಶದಲ್ಲಿರುವ ಗರ್ಭಿಣಿ, ಬಾಣಂತಿಯರನ್ನು ತಲುಪುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕೇರಳ ಮತ್ತು ತಮಿಳುನಾಡಿನಲ್ಲಿ ಬಾಣಂತಿಯರ ಮರಣ ಪ್ರಮಾಣ ಲಕ್ಷಕ್ಕೆ ನೂರು ಇದೆ. ರಾಜ್ಯದಲ್ಲಿ ಒಕ್ಕೂಟದ ವತಿಯಿಂದ ತಾಯಂದಿರ ಉಳಿವಿಗಾಗಿ ಕಾರ್ಯಕ್ರಮ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಕೆಎಸ್‌ಒಜಿಎ ಮತ್ತು ಸಮ್ಮೇಳನದ ಅಧ್ಯಕ್ಷ ಡಾ. ಎಂ.ಜಿ. ಹಿರೇಮಠ 4 ದಿನಗಳ ಈ ಸಮ್ಮೇಳನ ಮತ್ತು ಕಾರ್ಯಾಗಾರದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಶಿಕ್ಷಣ ತಜ್ಞರು ಮತ್ತು ವೈದ್ಯರು ಭಾಗವಹಿಸಲಿದ್ದಾರೆ ಎಂದರು.

ಖ್ಯಾತ ಶಿಕ್ಷಣ ತಜ್ಞ ಮತ್ತು ಪ್ರಸೂತಿ ತಜ್ಞ ತೈವಾನ್‌ನ ಪ್ರೊ. ತ್ಸಿ ಯಾಶು ಲೊ, ಮಲೇಷಿಯಾದ ಡಾ. ಸುರೇಶ್ ಕುಮಾರಸ್ವಾಮಿ, ಚೆನ್ನೈನ ಡಾ. ಗೋಪಿನಾಥ್, ಅಹಮದಾಬಾದ್‌ನ ಡಾ. ಪರುಲ್ ಕೋಟಡಿವಾಲ್, ಬೆಂಗಳೂರಿನ ಡಾ. ಶೀಲಾ ಮಾನೆ ಸೇರಿದಂತೆ ಇನ್ನಿತರರು ಇದ್ದರು.




ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ 24ನೇ ಸಮ್ಮೇಳನದಲ್ಲಿ ಅಖಿಲ ಭಾರತೀಯ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರ ಒಕ್ಕೂಟದ ಅಧ್ಯಕ್ಷೆ ಡಾ.ಹೇಮಾ ದಿವಾಕರ್ ಮಾತನಾಡಿದರು.

**ಕೇರಳ ಮತ್ತು ತಮಿಳುನಾಡಿನಲ್ಲಿ ಬಾಣಂತಿಯರ ಮರಣ ಪ್ರಮಾಣ ಲಕ್ಷಕ್ಕೆ ನೂರು ಇದೆ. ರಾಜ್ಯದಲ್ಲಿ ಒಕ್ಕೂಟದ ವತಿಯಿಂದ ತಾಯಂದಿರ ಉಳಿವಿಗಾಗಿ ಕಾರ್ಯಕ್ರಮ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.**

| Name of Media: | Hosa Digantha | Language: | Kannada |
|---|---|---|---|
| Date : | 05.10.2013 | Page: | 10 |

# ಮಹಿಳೆಯರ ಆರೋಗ್ಯ ರಕ್ಷಣೆಗೆ ವೈದ್ಯರ ಕಾಳಜಿ ಅಗತ್ಯ



**ಹುಬ್ಬಳ್ಳಿ:** ಮಹಿಳೆಯರ ಆರೋಗ್ಯ ರಕ್ಷಣೆಯ ವಿಷಯದಲ್ಲಿ ವೈದ್ಯರು ಹೆಚ್ಚು ಕಾಳಜಿ ವಹಿಸಬೇಕಾದ ಅಗತ್ಯವಿದೆ ಎಂದು ಕೆಎಸ್‌ಓಜಿಎ-2013ರ ಅಧ್ಯಕ್ಷೆ ಡಾ.ಹೇಮಾ ದಿವಾಕರ ತಮ್ಮ ಅಭಿಪ್ರಾಯಪಟ್ಟರು. ಅವರು, ಇಲ್ಲಿನ ಕಿಮ್ಸ್ ಆಸ್ಪತ್ರೆಯ ಸಭಾಂಗಣದಲ್ಲಿ ಶುಕ್ರವಾರ ಸಂಜೆ ಕಸೊಗಾ-2013ರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇಂದು ತಂತ್ರಜ್ಞಾನ ದಲ್ಲಿ ಬಹಳಷ್ಟು ಬದಲಾವಣೆಗಳಾಗಿದ್ದು, ವೈದ್ಯಕೀಯ ರಂಗದಲ್ಲೂ ಸಾಕಷ್ಟು ಬೆಳವಣಿಗೆಯಾಗಿದೆ. ಆದಾಗ್ಯೂ ಕೂಡ ಬೇರು ಮಟ್ಟದಲ್ಲಿ ಇದರ ಪ್ರಯೋಜನ ಅಷ್ಟೊಂದು ಕಂಡು ಬರುತ್ತಿಲ್ಲ. ಸ್ತ್ರೀ ರೋಗ ತಜ್ಞರು ಅದರಲ್ಲೂ ಪ್ರಸೂತಿ ತಜ್ಞವೈದ್ಯರು ಈ ದಿಸೆಯಲ್ಲಿ ಹೆಚ್ಚು ಗಮನ ಹರಿಸಬೇಕಾಗಿದೆ ಎಂದರು. ಕಿಮ್ಸ್‌ನ ನಿರ್ದೇಶಕಿ ಡಾ. ವಸಂತಾ ಕಾಮತ್ ಅವರು ಮಾತನಾಡಿ, ಈ ಹಿಂದೆ ನಮ್ಮ ದೇಶದ ವೈದ್ಯಕೀಯ ವಿದ್ಯಾರ್ಥಿಗಳು ಪಾಶ್ಚಿಮಾತ್ಯರ ಕಡೆಗೆ ನೋಡಬೇಕಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ; ವಿದೇಶದವರು ಭಾರತದತ್ತ ಮುಖಮಾಡುವಂತಾಗಿದೆ.ಪಾಶ್ಚಿಮಾತ್ಯ ವೈದ್ಯಕೀಯ ಪುಸ್ತಕಗಳನ್ನು, ಪದ್ಧತಿಯನ್ನು ಅಧ್ಯಯನ ಮಾಡಬೇಕಾಗಿತ್ತು. ಇಂದು ನಮ್ಮ ವೈದ್ಯಕೀಯ ಕ್ಷೇತ್ರ ಬಹಳಷ್ಟು ಪ್ರಗತಿ ಕಂಡಿದೆ ಎಂದು ಕಾಮತ್‌ಹೇಳಿದರು. ಹೇಮಾ ದಿವಾಕರ ದೀಪ ಬೆಳಗಿಸುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ತೈವಾನ್‌ನ ಪ್ರೊ.ತ್ಸಿಯಾ ಶು ಲೊ ಭಾಗವಹಿಸಿದ್ದರು. ಡಾ.ಶೃತಿ ಪ್ರಾರ್ಥಿಸಿದರು. ಡಾ.ರತರ್ನಮಾಲಾ ದೇಸಾಯಿ ಸ್ವಾಗತಿಸಿದರು.

ಕಸೊಗಾ-13ರ ಕಾರ್ಯಕಾರಿ ಸಮಿತಿ ಅಧ್ಯಕ್ಷ ಡಾ.ಎಂ.ಜಿ.ಹಿರೇಮಠ, ಡಾ.ಬಿ.ಆರ್.ದೇಸಾಯಿ, ಡಾ. ಎಸ್.ಎಸ್.ಹಿರೇಮಠ, ಡಾ. ಯು.ಎಸ್.ಹಂಗರಗಾ, ಡಾ.ದಿಲೀಪಕುಮಾರ ದತ್, ಡಾ.ಕಸ್ತೂರಿ ದೋಣಿಮಠ, ಡಾ.ವಿಜಯಚಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

| Name of Media: | Hosa Digantha | Language: | Kannada |
|---|---|---|---|
| Date : | 06.10.2013 | Page: | 13 |

### ಪೊಗ್ಸಿ ಅಧ್ಯಕ್ಷೆ ಡಾ.ಹೇಮಾ ದಿವಾಕರ್

# ಕುಗ್ರಾಮಗಳಿಗೆ ಮೌಲ್ಯಯುತ ಆರೋಗ್ಯ ಸೇವೆ

**ಹುಬ್ಬಳ್ಳಿ:** ರಾಜ್ಯದ ಕುಗ್ರಾಮಗಳಲ್ಲಿ ಬದುಕುತ್ತಿರುವ ಸ್ತ್ರೀಯರು ಗುಣಮಟ್ಟದ ಆರೋಗ್ಯಸೇವಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅದಕ್ಕೆ ಸಾಮಾಜಿಕ- ಆರ್ಥಿಕ ಅಂಶಗಳಲ್ಲದೆ ಸಂಪರ್ಕದ ಕೊರತೆಯೂ ಕಾರಣ. ಉತ್ತರ ಕರ್ನಾಟಕದ ಬಿಜಾಪುರ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಆರೋಗ್ಯಸೇವೆ ಪೂರೈಕೆಯಲ್ಲಿ ಬಹಳ ಹಿನ್ನಡೆಯಾಗಿದ್ದು ಮಾತೃ ಸಾವಿನ ಪ್ರಮಾಣ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಬಹಳ ಹೆಚ್ಚಾಗಿದೆ. ಈ ಪ್ರದೇಶಗಳಲ್ಲಿ ಆರೋಗ್ಯಸೇವೆಯ ಕುರಿತು ಹೆಚ್ಚಿನ ಗಮನ ನೀಡಬೇಕಾಗಿದೆ ಎಂದು ಪೊಗ್ಸಿಯ ಅಧ್ಯಕ್ಷೆ ಡಾ.ಹೇಮಾ ದಿವಾಕರ್ ಹೇಳಿದರು.

ಕಿಮ್ಸ್‌ನಲ್ಲಿ ನಡೆಯುತ್ತಿರುವ ಕರ್ನಾಟಕ ಸ್ಟೇಟ್ ಅಬ್‌ಸ್ಟೆಟ್ರಿಕ್ಸ್ ಅಂಡ್ ಗೈನಕಾಲಜಿ ಅಸೋಸಿಯೇಷನ್(ಕೆಎಸ್‌ಒಜಿಎ)ಯ 24ನೇ ಸಮ್ಮೇಳನದಲ್ಲಿ ಡಾ.ಹೇಮಾ ಮಾತನಾಡಿ, ಈ ಸಮ್ಮೇಳನ ಕರ್ನಾಟಕದ ಎಲ್ಲ ಪ್ರಸೂತಿ, ಗರ್ಭಧಾರಣೆ ಚಿಕಿತ್ಸಾ



ತಜ್ಞರನ್ನು ಸ್ತ್ರೀಯರಿಗೆ ಗುಣಮಟ್ಟದ ಆರೋಗ್ಯಸೇವೆ ನೀಡುವಲ್ಲಿ ಇರುವ ಸಮಸ್ಯೆಗಳನ್ನು ಚರ್ಚಿಸಲು ವೇದಿಕೆ ಸೃಷ್ಟಿಸಿಕೊಟ್ಟಿದೆ ಎಂದ ಅವರು, ತಲುಪಲಾಗದ ಸ್ತ್ರೀಯರನ್ನು ತಲುಪಲು ಹಲವಾರು ಉಪಕ್ರಮಗಳನ್ನು ಪ್ರಾರಂಭಿಸಲಾಗಿದೆ. ಮಣಿಪಾಲ್ ಮೆಡಿಕಲ್ ಕಾಲೇಜಿನ ಔಟ್‌ರೀಚ್ ಕಾರ್ಯಕ್ರಮಗಳು, ಕರುಣಾ ಟ್ರಸ್ಟ್ ಮತ್ತು ಆರ್ಟಿಸ್ಟ್‌ನ ಸಾರ್ವಜನಿಕ-ಖಾಸಗಿ ಸಹಭಾಗಿತ್ವ; ಕೆಎಚ್‌ಪಿಟಿಯ ನರ್ಸ್ ಮೆಂಟರ್ಸ್ ಕಾರ್ಯಕ್ರಮಗಳು ತಲುಪಲಾಗದವರನ್ನು ತಲುಪುವ ಉಪಕ್ರಮಗಳಾಗಿವೆ ಎಂದು ಹೇಳಿದರು.

ಕೇರಳ ಮತ್ತು ತಮಿಳುನಾಡಿನಲ್ಲಿ ಎಂಎಂಆರ್ ಪ್ರಮಾಣ 100,000ಕ್ಕೆ 100ಕ್ಕಿಂತ ಕಡಿಮೆ ಇದ್ದು ಕರ್ನಾಟಕ ಈ ನಿಟ್ಟಿನಲ್ಲಿ ಇನ್ನೂ ಪ್ರಯತ್ನಿಸಬೇಕಾಗಿದೆ ಎಂದು ಡಾ.ಹೇಮಾ ತಿಳಿಸಿದರು.

ದೇಶದ ಆರೋಗ್ಯಸೇವೆಗೆ ಡಾ.ಹೇಮಾ ಅವರ ಶ್ರೇಷ್ಠ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಜೀವಿತಾವಧಿ ಸಾಧನೆ ಪ್ರಶಸ್ತಿ ಯನ್ನು ನೀಡಿ ಸತ್ಕರಿಸಲಾಯಿತು.

ಖ್ಯಾತ ಶಿಕ್ಷಣ ತಜ್ಞರು ಮತ್ತು ಅಬ್ ಗೈನ್ ತಜ್ಞರಾದ ತೈವಾನ್‌ನ ಪ್ರೊ.ತ್ಸಿ ಯಾಶು ಲೊ, ಮಲೇಷಿಯಾದ ಡಾ.ಸುರೇಶ್ ಕುಮಾರಸ್ವಾಮಿ, ಚೆನ್ನೈನ ಡಾ.ಗೋಪಿನಾಥ್, ಅಹಮದಾಬಾದ್‌ನ ಡಾ.ಪರುಲ್ ಕೋಟಡಿವಾಲ್, ಬೆಂಗಳೂರಿನ ಡಾ.ಶೀಲಾ ಮಾನೆ ಮತ್ತು ಹಲವಾರು ಮಂದಿ ಖ್ಯಾತ ತಜ್ಞರು ಸಮ್ಮೇಳನದಲ್ಲಿ ಭಾಗವಹಿಸಿ ಚರ್ಚೆಗಳಲ್ಲಿ ಪಾಲ್ಗೊಂಡರು.

| Name of Media: | Vijayavani | Language: | Kannada |
|---|---|---|---|
| Date : | 05.10.2013 | Page: | 5 |

## ಸ್ತ್ರೀರೋಗ ತಜ್ಞರ ರಾಜ್ಯ ಸಮ್ಮೇಳನಕ್ಕೆ ಚಾಲನೆ

# 'ಗರ್ಭಿಣಿಯರಿಗೆ ಸಮರ್ಪಕ ವೈದ್ಯಕೀಯ ಸೇವೆ ಸಿಗಲಿ'

**ಹುಬ್ಬಳ್ಳಿ:** ಪ್ರತಿಯೊಬ್ಬ ಗರ್ಭಿಣಿಯೂ ವೈದ್ಯಕೀಯ ಪರೀಕ್ಷೆಗೆ ಒಳಪಡುವುದು ಅಗತ್ಯವಾಗಿದ್ದು, ಈ ದಿಸೆಯಲ್ಲಿ ಸ್ತ್ರೀರೋಗ ತಜ್ಞರು ಸಮರ್ಪಕ ಸೇವೆ ಒದಗಿಸಲು ಪ್ರಯತ್ನಿಸಬೇಕು ಎಂದು ಮುಂಬೈನ ಫಾಗ್ಸಿ (ಪ್ರಸೂತಿ ತಜ್ಞರ ಸಂಘಟನೆಗಳ ಒಕ್ಕೂಟ) ಅಧ್ಯಕ್ಷೆ ಡಾ. ಹೇಮಾ ದಿವಾಕರ ಹೇಳಿದರು.

ಇಲ್ಲಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್)ಯಲ್ಲಿ ಕರ್ನಾಟಕ ರಾಜ್ಯ ಸ್ತ್ರೀರೋಗ- ಪ್ರಸೂತಿ ತಜ್ಞರ ಸಂಘದ ವತಿಯಿಂದ ಆಯೋಜಿಸಲಾಗಿರುವ ರಾಜ್ಯ ಮಟ್ಟದ ಸಮ್ಮೇಳನವನ್ನು ಶುಕ್ರವಾರ ಸಂಜೆ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳೆಯರಿಗೆ, ಅದರಲ್ಲೂ ಗರ್ಭಿಣಿಯರಿಗೆ ಸರಿಯಾದ ಉಪಚಾರ ಅಗತ್ಯ. ಅವರು ಆಸ್ಪತ್ರೆಗೆ ಬಂದರೆ ಅವರ ಮುಖದಲ್ಲಿ ಮಂದಹಾಸ ಮೂಡುವಂತಹ ವಾತಾವರಣ ಸೃಷ್ಟಿಸಬೇಕು' ಎಂದರು.

ದೇಶದಲ್ಲಿ ಬಹಳಷ್ಟು ಮಹಿಳೆಯರು ವೈದ್ಯಕೀಯ ಉಪಚಾರದಿಂದ ವಂಚಿತರಾಗುತ್ತಿದ್ದಾರೆ. ತಾವು ಮುಂಬೈಗೆ ಹೋದಾಗ ಮೊದಲ ಬಾರಿ ಲೋಕಲ್ ಟ್ರೇನ್‌ನಲ್ಲಿ ಪ್ರಯಾಣ ಮಾಡಿದ ಸಂದರ್ಭದಲ್ಲಿ ತಳಮಟ್ಟದ ಮಹಿಳೆಯರ ಕಷ್ಟ- ನೋವುಗಳು ಗಮನಕ್ಕೆ ಬಂದವು. ಆಗಲೇ ವಾಸ್ತವತೆ ಅರಿವಾಗಿತ್ತು ಎಂದು ಡಾ. ಹೇಮಾ ಅನುಭವ ಹಂಚಿಕೊಂಡರು.



ಹುಬ್ಬಳ್ಳಿ ಕಿಮ್ಸ್ ಸಭಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಸ್ತ್ರೀರೋಗ- ಪ್ರಸೂತಿ ತಜ್ಞರ ಸಮ್ಮೇಳನವನ್ನು ಮುಂಬೈ ಫಾಗ್ಸಿ ಅಧ್ಯಕ್ಷೆ ಡಾ. ಹೇಮಾ ದಿವಾಕರ ಉದ್ಘಾಟಿಸಿದರು. ಡಾ. ವಸಂತಾ ಕಾಮತ್, ಡಾ. ಎಂ.ಜಿ. ಹಿರೇಮಠ, ಡಾ. ರತ್ನಮಾಲಾ ದೇಸಾಯಿ ಇತರರಿದ್ದರು.

ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾತನಾಡಿದ ಕಿಮ್ಸ್ ನಿರ್ದೇಶಕಿ ಡಾ. ವಸಂತಾ ಕಾಮತ್, ಈ ಮೊದಲು ಭಾರತದ ವೈದ್ಯರೆಲ್ಲ ಕಲಿಕೆ, ಜ್ಞಾನ ಗಳಿಕೆಗೆ ಹೊರ ದೇಶಗಳನ್ನೇ ಅವಲಂಬಿಸಬೇಕಾಗಿತ್ತು. ಆದರೆ, ಇಂದು ಎಲ್ಲ ರಂಗಗಳಲ್ಲೂ ಮುಂಚೂಣಿಯಲ್ಲಿದ್ದು, ವಿದೇಶಿಯರೂ ಈಗ ವೈದ್ಯಕೀಯ ಸೌಲಭ್ಯಕ್ಕಾಗಿ ಭಾರತದತ್ತ ಮುಖ ಮಾಡುತ್ತಿದ್ದಾರೆ. ಅಷ್ಟರ ಮಟ್ಟಿಗೆ ಭಾರತೀಯರು ಸಾಧನೆ ಮಾಡಿದ್ದಾರೆ ಎಂದು ಹೇಳಿದರು.

ತೈವಾನ್ ದೇಶದ ಪ್ರೊ. ಟಿ.ಎಸ್. ಲೂ ಅವರು ಮಾತನಾಡಿ, ಸಮ್ಮೇಳನದ ವಿಚಾರ ಗೋಷ್ಠಿಯಲ್ಲಿ ಉಪನ್ಯಾಸ ನೀಡುವ ಅವಕಾಶ ತಮಗೆ ಸಿಕ್ಕಿದ್ದು, ಇದರಿಂದ ಎರಡು ದೇಶಗಳ ಮಧ್ಯೆ ಸ್ನೇಹ ಬೆಳೆಯಲು ಸಹಕಾರಿಯಾಗಿದೆ ಎಂದರು.

ಡಾ. ದಿಲೀಪಕುಮಾರ ದತ್ತ ಮಾತನಾಡಿದರು. ಸಂಘದ ಅಧ್ಯಕ್ಷ ಡಾ. ಎಂ.ಜಿ. ಹಿರೇಮಠ, ಡಾ. ಪ್ರತಾಪಕುಮಾರ, ಡಾ. ಮಮತಾ ಮಹೇಶ, ಡಾ. ಎಸ್.ಎಸ್. ಹಿರೇಮಠ, ಡಾ. ಕಸ್ತೂರಿ ಡೋಣಿಮಠ, ಡಾ. ಬಿ.ಆರ್. ದೇಸಾಯಿ, ಡಾ. ಯು.ಎಸ್. ಹಂಗರಗಾ, ಡಾ. ವಿಜಯಚಂದ್ರ ಇತರರು ಉಪಸ್ಥಿತರಿದ್ದರು.

ಶೃತಿ ಪ್ರಾರ್ಥನೆ ಹಾಡಿದರು. ಡಾ. ರತ್ನಮಾಲಾ ದೇಸಾಯಿ ಸ್ವಾಗತಿಸಿದರು. ಡಾ. ವಿದ್ಯಾ ಭಟ್ಟ ವಾರ್ಷಿಕ ವರದಿ ವಾಚನ ಮಾಡಿದರು.

ಈ ಸಮ್ಮೇಳನದಲ್ಲಿ ವಿವಿಧ ಗೋಷ್ಠಿ-ಕಾರ್ಯಾಗಾರ ನಡೆಯಲಿದ್ದು ಅ. 6ರಂದು ಸಮಾರೋಪಗೊಳ್ಳಲಿದೆ.

| Name of Media: | Vijayavani | Language: | Kannada |
|---|---|---|---|
| Date : | 06.10.2013 | Page: | 3 |



ಹುಬ್ಬಳ್ಳಿ ಕಿಮ್ಸ್‌ನಲ್ಲಿ ನಡೆದಿರುವ, ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರ (ಕೆಎಸ್‌ಒಜಿಎ) ಸಮ್ಮೇಳನದಲ್ಲಿ ಮುಂಬೈನ ಭಾರತೀಯ ಸ್ತ್ರೀರೋಗ ತಜ್ಞರ ಸಂಘದ ಅಧ್ಯಕ್ಷೆ ಡಾ. ಹೇಮಾ ದಿವಾಕರ ಅವರಿಗೆ ಕೆಎಸ್ ಒಜಿಎ ವತಿಯಿಂದ 'ಜೀವಿತಾವಧಿ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘಟನೆ ಅಧ್ಯಕ್ಷ ಡಾ. ಎಂ.ಜಿ. ಹಿರೇಮಠ, ತೈವಾನ್‌ನ ಪ್ರೊ.ತ್ಸಿಯಾಹು ಲೋ, ಮಲೇಷಿಯಾದ ಡಾ. ಸುರೇಶ ಕುಮಾರಸ್ವಾಮಿ, ಚೆನ್ನೈನ ಡಾ. ಗೋಪಿನಾಥ, ಇತರರು ಮೊದಲಾದವರು ಇದ್ದರು.

| Name of Media: | Indu Sanje | Language: | Kannada |
|---|---|---|---|
| Date : | 05.10.2013 | Page: | 4 |



ಹುಬ್ಬಳ್ಳಿ: ನಗರದ ಕಿಮ್ಸ್‌ನಲ್ಲಿ ನಿನ್ನೆ ಜರುಗಿದ 24ನೇ ಕೆಎಸ್‌ಒಜಿಎ ಸಮ್ಮೇಳನವನ್ನು ಡಾ.ಹೇಮಾ ದಿವಾಕರ ಉದ್ಘಾಟಿಸಿದರು. ಕಿಮ್ಸ್ ನಿರ್ದೇಶಕಿ ಡಾ.ವಸಂತಾ ಕಾಮತ್, ಡಾ.ಯು.ಎಸ್.ಹಂಗರಗಾ, ಡಾ. ಬಿ.ಆರ್. ದೇಸಾಯಿ, ಡಾ.ಎಂ.ಜಿ.ಹಿರೇಮಠ, ಪ್ರೊ. ಶಿಯಾ ಶು ಲೋ. ಡಾ.ವಿದ್ಯಾ ಭಟ್, ಡಾ.ಎಸ್.ಎಸ್.ಹಿರೇಮಠ ಹಾಗೂ ಮುಂತಾದವರು ಉಪಸ್ಥಿತರಿದ್ದರು.

| Name of Media: | Indu Sanje | Language: | Kannada |
| --- | --- | --- | --- |
| Date : | 07.10.2013 | Page: | 4 |



ನಗರದ ಕಿಮ್ಸ್‌ನಲ್ಲಿ ನಡೆದಿರುವ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರ ಕೆಎಸ್‌ಒಜಿಎ ಸಮ್ಮೇಳನದಲ್ಲಿ ಮುಂಬೈನ ಭಾರತೀಯ ಸ್ತ್ರೀರೋಗ ತಜ್ಞರ ಸಂಘದ ಅಧ್ಯಕ್ಷೆ ಡಾ. ಹೇಮಾ ದಿವಾಕರ ಅವರಿಗೆ ಕೆ ಎಸ್ ಒ ಜಿ ಎ ವತಿಯಿಂದ ಜೀವಿತಾವಧಿ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ಡಾ. ಎಂ.ಜಿ. ಹಿರೇಮಠ, ತೈವಾನ್‌ನ ಪ್ರೊತ್ಸಿಯಾಶುಲೋ, ಮಲೇಶಿಯಾದ ಡಾ. ಸುರೇಶ ಕುಮಾರಸ್ವಾಮಿ, ಚನ್ನೈ ಡಾ. ಗೋಪಿನಾಥ ಮುಂತಾದವರು ಉಪಸ್ಥಿತರಿದ್ದರು.

| Name of Media: | Sanje Darpana | Language: | Kannada |
| --- | --- | --- | --- |
| Date : | 05.10.2013 | Page: | 4 |



ನಗರದ ಕಿಮ್ಸ್ ಸಭಾಂಗಣದಲ್ಲಿ ನಡೆದ ರಾಜ್ಯಮಟ್ಟದ ಸ್ತ್ರೀ ರೋಗ-ಪ್ರಸೂತಿ ತಜ್ಞರ ಸಮ್ಮೇಳನವನ್ನು ಮುಂಬೈ ಫಾಗ್ಸಿ ಅಧ್ಯಕ್ಷೆ ಡಾ. ಹೇಮಾ ದಿವಾಕರ ಉದ್ಘಾಟಿಸಿದರು. ಡಾ. ವಸಂತಾ ಕಾಮತ, ಡಾ.ಎಂ.ಜಿ. ಹಿರೇಮಠ, ಡಾ. ರತ್ನಮಾಲಾ ದೇಸಾಯಿ. ಡಾ. ಯು.ಎಸ್. ಹಂಗರಗಾ ಸೇರಿದಂತೆ ಅನೇಕರು ಈ ಸಂದರ್ಭದಲ್ಲಿದ್ದರು.

| Name of Media: | Sanje Darpana | Language: | Kannada |
|---|---|---|---|
| Date : | 06.10.2013 | Page: | 4 |



ಹುಬ್ಬಳ್ಳಿ ಕಿಮ್ಸ್‌ನಲ್ಲಿ ನಡೆದಿರುವ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರ (ಕೆಎಸ್‌ಒಜಿಎ) ಸಮ್ಮೇಳನದಲ್ಲಿ ಮುಂಬೈನ ಭಾರತೀಯ ಸ್ತ್ರೀರೋಗ ತಜ್ಞರ ಸಂಘದ ಅಧ್ಯಕ್ಷೆ ಡಾ. ಹೇಮಾ ದಿವಾಕರ ಅವರಿಗೆ ಕೆ ಎಸ್ ಒಜಿ ಎ ವತಿಯಿಂದ ' ಜೀವಿತಾವಧಿ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘಟನೆ ಅಧ್ಯಕ್ಷ ಡಾ. ಎಂ.ಜಿ. ಹಿರೇಮಠ, ತೈವಾನ್‌ನ ಪ್ರೊ.ತ್ಸಿಯಾಶು ಲೋ, ಮಲೇಶಿಯಾದ ಡಾ. ಸುರೇಶ ಕುಮಾರಸ್ವಾಮಿ , ಚೆನ್ನೈ ಡಾ. ಗೋಪಿನಾಥ, ಇತರರು ಇದ್ದರು.

| Name of Media: | Hubli Sanje | Language: | Kannada |
|---|---|---|---|
| Date : | 05.10.2013 | Page: | 4 |



ಹುಬ್ಬಳ್ಳಿ: ನಗರದ ಕಿಮ್ಸ್‌ನಲ್ಲಿ ಶುಕ್ರವಾರ ಜರುಗಿದ 24ನೇ ಕೆಎಸ್‌ಒಜಿಎ ಸಮ್ಮೇಳನವನ್ನು ಡಾ.ಹೇಮಾ ದಿವಾಕರ ಉದ್ಘಾಟಿಸಿದರು. ಕಿಮ್ಸ್ ನಿರ್ದೇಶಕಿ ಡಾ.ವಸಂತಾ ಕಾಮತ್, ಡಾ.ಯು.ಎಸ್.ಹಂಗರಗಾ, ಡಾ. ಬಿ.ಆರ್.ದೇಸಾಯಿ, ಡಾ.ಎಂ.ಜಿ.ಹಿರೇಮಠ, ಪ್ರೊ. ಶಿಯಾ ಶು ಲೋ. ಡಾ.ವಿದ್ಯಾ ಭಟ್, ಡಾ.ಎಸ್.ಎಸ್.ಹಿರೇಮಠ ಹಾಗೂ ಇತರರು ಚಿತ್ರದಲ್ಲಿದ್ದಾರೆ.

| Name of Media: | Hubli Sanje | Language: | Kannada |
|---|---|---|---|
| Date : | 06.10.2013 | Page: | 4 |



ಕರ್ನಾಟಕ ಸ್ಟೇಟ್ ಆಬ್‌ಸ್ಟೆಟ್ರಿಕ್ಸ್ ಆ್ಯಂಡ್ ಗ್ಯಾನಾಲೋಜಿ ಅಸೋಸಿಯೇಶನ್ ವೈದ್ಯಕೀಯ ಕ್ಷೇತ್ರದಲ್ಲಿ ಜೀವಮಾನ ಸಾಧನೆಗೆ ಕೊಡಮಾಡುವ ಪ್ರಶಸ್ತಿಯನ್ನು ಫೋಗ್ಸಿ ಸಂಸ್ಥೆಯ ಅಧ್ಯಕ್ಷೆ ಡಾ.ಹೇಮಾ ದಿವಾಕರ, ಅವರಿಗೆ 24ನೇ ವಾರ್ಷಿಕ ಸಮಾವೇಶದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಸಮಾರಂಭದಲ್ಲಿ ಡಾ.ಎಂ.ಜಿ.ಹಿರೇಮಠ ವಿತರಿಸಿದರು. ಈ ಸಂದರ್ಭದಲ್ಲಿ ಡಾ.ಬಿ.ಆರ್.ದೇಸಾಯಿ, ಡಾ..ಪ್ರತಾಪಕುಮಾರ ಉಪಸ್ಥಿತರಿದ್ದರು.

| Name of Media: | NagarikaVani | Language: | Kannada |
|---|---|---|---|
| Date : | 07.10.2013 | Page: | 3 |

# ಗ್ರಾಮೀಣ ಪ್ರದೇಶದ ಸ್ತ್ರೀಯರಿಗೆ ಗುಣಮಟ್ಟದ ಆರೋಗ್ಯಸೇವಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ:ಡಾ.ಹೇಮಾ ದಿವಾಕರ




ಹುಬ್ಬಳ್ಳಿ; ಫೊಗ್ಸಿಯ ಅಧ್ಯಕ್ಷೆ ಡಾ.ಹೇಮಾ ದಿವಾಕರ್, 'ರಾಜ್ಯದ ಕುಗ್ರಾಮಗಳಲ್ಲಿ ಬದುಕುತ್ತಿರುವ ಸ್ತ್ರೀಯರು ಗುಣಮಟ್ಟದ ಆರೋಗ್ಯಸೇವಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅದಕ್ಕೆ ಸಾಮಾಜಿಕ–ಆರ್ಥಿಕ ಅಂಶಗಳಲ್ಲದೆ ಸಂಪರ್ಕದ ಕೊರತೆಯೂ ಕಾರಣ. ಉತ್ತರ ಕರ್ನಾಟಕದ ಬಿಜಾಪುರ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಆರೋಗ್ಯಸೇವೆ ಪೂರೈಕೆಯಲ್ಲಿ ಬಹಳ ಹಿನ್ನಡೆಯಾಗಿದ್ದು ಮಾತೃಸಾವಿನ ಪ್ರಮಾಣ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಬಹಳ ಹೆಚ್ಚಾಗಿದೆ. ಕರ್ನಾಟಕದ ಈ ಪ್ರದೇಶಗಳಲ್ಲಿ ಆರೋಗ್ಯಸೇವೆಯ ಕುರಿತು ಹೆಚ್ಚಿನ ಗಮನ ನೀಡಬೇಕಾಗಿದೆ' ಎಂದರು.

ಕರ್ನಾಟಕದಾದ್ಯಂತ ಆರೋಗ್ಯಸೇವೆಯನ್ನು ಸದೃಢಗೊಳಿಸುವ ದೃಷ್ಟಿಯಿಂದ ಪ್ರಸೂತಿ ತಜ್ಞರ ಉನ್ನತ ಸಂಸ್ಥೆ ಫೆಡರೇಷನ್ ಆಫ್ ಅಬ್‌ಸ್ಟೆಟ್ರಿಕ್ ಅಂಡ್ ಗೈನಕಾಲಜಿಕಲ್ ಸೊಸೈಟೀಸ್ ಆಫ್ ಇಂಡಿಯಾ(ಫೊಗ್ಸಿ) ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದು ಅದರಲ್ಲಿ ಆರೋಗ್ಯ ಕಾರ್ಯಕರ್ತರು ಮತ್ತು ಅಬ್‌ಸ್ಟೆಟ್ರಿಷಿಯನ್ ಮತ್ತು ಗೈನಕಾಲಜಿಸ್ಟರಿಗೆ ಅತ್ಯಾಧುನಿಕ ತಂತ್ರಜ್ಞಾನಗಳು, ಪರಿಣಿತಿ ಮತ್ತು ಪ್ರವೃತ್ತಿಗಳ ಕುರಿತು ತರಬೇತಿ ನೀಡುವುದೂ ಸೇರಿದೆ.

ತಲುಪಲಾಗದ ಸ್ತ್ರೀಯರನ್ನು ತಲುಪಲು ಹಲವಾರು ಉಪಕ್ರಮಗಳನ್ನು ಪ್ರಾರಂಭಿಸಲಾಗಿದೆ.. ಕೆಎಸ್‌ಒಜಿಎ ಸಮ್ಮೇಳನ ಕರ್ನಾಟಕದಲ್ಲಿ ತಮ್ಮ ಕಾರ್ಯ ನಿರ್ವಹಣೆಯ ಪ್ರದರ್ಶನ ಮತ್ತು ಅನುಭವ ಹಂಚಿಕೆ ಹಾಗೂ ರಾಜ್ಯದಲ್ಲಿ ಸ್ತ್ರೀಯರ ಆರೋಗ್ಯಸಮಸ್ಯೆಗಳ ನಿವಾರಿಸುವಿಕೆ ಕುರಿತು ತೀರ್ಮಾನಕ್ಕೆ ವೇದಿಕೆಯಾಯಿತು. ಖ್ಯಾತ ಶಿಕ್ಷಣ ತಜ್ಞರು ಮತ್ತು ಅಬ್‌ಗೈನ್ ತಜ್ಞರಾದ ತೈವಾನ್‌ನ ಪ್ರೊ. ತ್ರಿಯಾಶು ಲೊ, ಮಲೇಷಿಯಾದ ಡಾ.ಸುರೇಶ್ ಕುಮಾರಸ್ವಾಮಿ, ಚೆನ್ನೈನ ಡಾ.ಗೋಪಿನಾಥ್, ಅಹಮದಾಬಾದ್‌ನ ಡಾ.ಪರುಲ್ ಕೋಟಡಿವಾಲ್, ಬೆಂಗಳೂರಿನ ಡಾ.ಶೀಲಾ ಮಾನೆ ಮತ್ತು ಹಲವಾರು ಮಂದಿ ಖ್ಯಾತ ತಜ್ಞರು ಸಮ್ಮೇಳನದಲ್ಲಿ ಭಾಗವಹಿಸಿ ಚರ್ಚೆಗಳಲ್ಲಿ ಪಾಲ್ಗೊಂಡರು.